# ಅಧ್ಯಾಯ–5

# ತೀರ್ಮಾನ ಮತ್ತು ಶಿಫಾರಸುಗಳು





# ಅಧ್ಯಾಯ-5
## ತೀರ್ಮಾನ ಮತ್ತು ಶಿಫಾರಸುಗಳು

## ತೀರ್ಮಾನ

### ಡಿಬಿಟಿ ಅನುಷ್ಠಾನ ಮತ್ತು ನಿರ್ವಹಣೆ

ರಾಜ್ಯದಲ್ಲಿ ಕೋರ್ ಡಿಬಿಟಿ ಪೋರ್ಟಲ್ ಮೂಲಕ ನಗದು ವರ್ಗಾವಣೆ ಮತ್ತು ಸೇವೆಗಳ ವಿತರಣೆಯು ಪ್ರೋತ್ಸಾಹದಾಯಕವಾಗಿಲ್ಲ. ಡಿಬಿಟಿ ಕೋಶದಿಂದ ಸೇರ್ಪಡೆ ಪ್ರಕ್ರಿಯೆಯ ಮೇಲ್ವಿಚಾರಣೆಯ ಅನುಪಸ್ಥಿತಿಯು ಗುರುತಿಸಲಾದ ಯೋಜನೆಗಳಲ್ಲಿ ಕೇವಲ ಶೇಕಡಾ 35ರಷ್ಟು ಮಾತ್ರ ಸೇರ್ಪಡೆಯಾಗುವಲ್ಲಿ ಕಾರಣವಾಯಿತು. ವಹಿವಾಟುಗಳ ಯಶಸ್ವಿನ ಪ್ರಮಾಣವು ಪ್ರಸ್ತುತ ಶೇಕಡಾ 83ರಷ್ಟಿದ್ದರೂ, ವಹಿವಾಟುಗಳನ್ನು ಪ್ರಕ್ರಿಯೆಗೊಳಿಸುವುದರಲ್ಲಿ ಗಮನಾರ್ಹ ವಿಳಂಬಗಳು ಕಂಡುಬಂದವು, ಇದು ಪ್ರಯೋಜನಗಳ ವಿಳಂಬದ ವಿತರಣೆಗೆ ಕಾರಣವಾಯಿತು. ಡಿಬಿಟಿ ಪೋರ್ಟಲ್ ಮತ್ತು ಬ್ಯಾಂಕ್ ಮಟ್ಟದಲ್ಲಿ ಮೌಲ್ಯೀಕರಣದ ಪರಿಶೀಲನೆಗಳು ದೋಷಪೂರಿತವಾಗಿದ್ದು, ತಪ್ಪಾದ ಖಾತೆಗಳಿಗೆ ಜಮೆ ಮಾಡುವಲ್ಲಿ ಪರಿಣಮಿಸಿತು. ವಿಫಲವಾದ, ಬಾಕಿ ಉಳಿದಿರುವ ಮತ್ತು ತಿರಸ್ಕೃತ ವಹಿವಾಟುಗಳು ದೀರ್ಘಾವಧಿಯವರೆಗೆ ಪರಿಹರಿಸದೇ ಉಳಿದಿರುವ ಪರಿಣಾಮವಾಗಿ ಅರ್ಹ ಫಲಾನುಭವಿಗಳಿಗೆ ಪ್ರಯೋಜನಗಳನ್ನು ತಲುಪಿಸಲಾಗಿಲ್ಲ. ಸ್ಥಳೀಯ ಅಪ್ಲಿಕೇಶನ್‌ಗಳು ಮತ್ತು ಇತರ ಜವಾಬ್ದಾರಸ್ಥರೊಂದಿಗೆ ಕೋರ್ ಡಿಬಿಟಿ ಪೋರ್ಟಲ್‌ನ ಏಕೀಕರಣದ ಕೊರತೆಯಿದ್ದಿತು ಅಥವಾ ಅನುಪಸ್ಥಿತಿಯಿದ್ದಿತು. ಕೋರ್ ಡಿಬಿಟಿ ಪೋರ್ಟಲ್ ಮತ್ತು ಸ್ಥಳೀಯ ಅಪ್ಲಿಕೇಶನ್‌ಗಳ ನಡುವಿನ ಸಮನ್ವಯವು ದತ್ತಾಂಶದಲ್ಲಿ ಅಸಾಮರಸ್ಯಕ್ಕೆ ಕಾರಣವಾಗಿದೆ. ಭದ್ರತಾ ಪರಿಶೋಧನೆಯು ಅಸಮರ್ಪಕವಾಗಿದೆ ಮತ್ತು ದುರ್ಬಲತೆಗಳು ಮತ್ತು ಅಪಾಯಕ್ಕೆ ಒಡ್ಡಿಕೊಳ್ಳುವುದನ್ನು ಗುರುತಿಸಲು ಡಿಬಿಟಿ ಅಪ್ಲಿಕೇಶನ್‌ನ ಆವರ್ತಕ ಅಪಾಯದ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿಲ್ಲ.

### ಆಯ್ದ ಯೋಜನೆಗಳಲ್ಲಿ ಡಿಬಿಟಿಯ ಅನುಷ್ಠಾನ

*ಹಾಲು ಪ್ರೋತ್ಸಾಹಧನ ಯೋಜನೆ*

ಈ ಯೋಜನೆಯಡಿ ಪ್ರಯೋಜನಗಳ ವಿತರಣೆಯನ್ನು ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆಯ ಸ್ಥಳೀಯ ಅಪ್ಲಿಕೇಶನ್ ಕ್ಷೀರಸಿರಿ ಮೂಲಕ ನಡೆಸಲಾಯಿತು. ಹನ್ನೊಂದು ಮಾಡ್ಯೂಲ್‌ಗಳಲ್ಲಿ ಐದು ಮಾಡ್ಯೂಲ್‌ಗಳನ್ನು ಕಾರ್ಯಗತಗೊಳಿಸದ ಕಾರಣ ಅಪ್ಲಿಕೇಶನ್ ಪೂರ್ಣಗೊಂಡಿಲ್ಲ. ಸಂಘಗಳು ಬಳಸುತ್ತಿರುವ ಅನೇಕ ಸ್ವತಂತ್ರ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಇನ್ನೂ ಏಕೀಕರಣಗೊಳಿಸದ ಪರಿಣಾಮವಾಗಿ ನೈಜ ಸಮಯದ ದತ್ತಾಂಶ ದಾಖಲೆ ಮತ್ತು ಸ್ವಯಂಚಾಲಿತ ಮೌಲ್ಯೀಕರಣ ಪ್ರಕ್ರಿಯೆಯ ಅನುಪಸ್ಥಿತಿಯಿದ್ದಿತು. ದತ್ತಾಂಶ ರಚನೆ ಮತ್ತು ಮೌಲ್ಯೀಕರಣದಲ್ಲಿ ಹಸ್ತಚಾಲಿತ ಮಧ್ಯಸ್ಥಿಕೆಗಳು, ಸರಬರಾಜು ಮಾಡಿದ ಹಾಲಿನ ಗುಣಮಟ್ಟ ಮತ್ತು ಪ್ರಮಾಣದಲ್ಲಿ ವಿಶ್ವಾಸಾರ್ಹತೆ ಇಲ್ಲದಿರುವುದು ಮತ್ತು ಇನ್‌ಪುಟ್ ಮೌಲ್ಯೀಕರಣ ನಿಯಂತ್ರಣಗಳ ಅನುಪಸ್ಥಿತಿಯು ದತ್ತಾಂಶ ಸಮಗ್ರತೆ ಮತ್ತು ಅದರ ವಿಶ್ವಾಸಾರ್ಹತೆಯ ಮೇಲೆ ಗಂಭೀರ ಕಾಳಜಿಯನ್ನು ಹುಟ್ಟುಹಾಕುತ್ತದೆ. ಕ್ಷೀರಸಿರಿ ಅಪ್ಲಿಕೇಶನ್‌ನ ದಾಖಲಾತಿ ಬಹುತೇಕ ಮಟ್ಟಿಗೆ ಅಸ್ತಿತ್ವದಲ್ಲಿರಲಿಲ್ಲ. ಬದಲಾವಣೆ ನಿರ್ವಹಣಾ ಕಾರ್ಯವಿಧಾನದ ಅನುಪಸ್ಥಿತಿಯು ಅಪ್ಲಿಕೇಶನ್‌ನಲ್ಲಿ ಅನಧಿಕೃತ ಬದಲಾವಣೆಗಳಿಗೆ ಕಾರಣವಾಯಿತು. ಅಪಾಯದ ಅಂದಾಜು ಮತ್ತು ಭದ್ರತಾ ಪರಿಶೋಧನೆ ಇವುಗಳನ್ನು ನಡೆಸದಿರುವುದರಿಂದಾಗಿ ಅಪ್ಲಿಕೇಶನ್ ಅನ್ನು ದುರ್ಬಲಗೊಳಿಸಿದಂತಾಗಿದೆ.

### *ರೈತಸಿರಿ, ಎನ್‌ಎಫ್‌ಎಸ್‌ಎಮ್ ಮತ್ತು ಪಿಎಮ್-ಕಿಸಾನ್ ಯೋಜನೆಗಳು*

ಡಿಬಿಟಿ ಪೋರ್ಟಲ್‌ಗೆ ಸೇರ್ಪಡೆ ಮಾಡಿದ ಹೊರತಾಗಿಯೂ, ಡಿಸೆಂಬರ್ 2019ರಿಂದ ಮಾರ್ಚ್ 2020ರವರೆಗೆ ರೈತಸಿರಿ ಮತ್ತು ಎನ್‌ಎಫ್‌ಎಸ್‌ಎಮ್ ಯೋಜನೆಗಳಡಿಯಲ್ಲಿ ₹5.94 ಕೋಟಿ ನಗದನ್ನು ಕೋರ್ ಡಿಬಿಟಿಯ ಹೊರಗೆ ವರ್ಗಾಯಿಸಲಾಗಿದೆ. ಎನ್‌ಎಫ್‌ಎಸ್‌ಎಮ್ ಮತ್ತು ಪಿಎಮ್-ಕಿಸಾನ್ ಯೋಜನೆಗಳಡಿಯಲ್ಲಿ ದತ್ತಾಂಶ ಮೌಲ್ಯೀಕರಣಗಳ ಅನುಪಸ್ಥಿತಿಯಿದ್ದು, ದತ್ತಾಂಶ ಹೊಂದಾಣಿಕೆ ಆಗದಿರುವಲ್ಲಿ ಮತ್ತು ಅನರ್ಹ ಫಲಾನುಭವಿಗಳಿಗೆ ಪ್ರಯೋಜನಗಳ ವಿಸ್ತರಣೆಯಲ್ಲಿ ಪರಿಣಮಿಸಿದೆ. ಅಸಮರ್ಪಕ ವ್ಯಾಪ್ತಿಯ ನಿದರ್ಶನಗಳು ಮತ್ತು ಅರ್ಹ ಫಲಾನುಭವಿಗಳಿಗೆ ನಗದು ಪ್ರಯೋಜನಗಳನ್ನು ತಲುಪಿಸದಿರುವ ಉದಾಹರಣೆಗಳಿವೆ.

## ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

### *ಡಿಬಿಟಿ ಕೋಶ*

ಆಯ್ದ ಯೋಜನೆಗಳ ಸಮಯೋಚಿತ ಸೇರ್ಪಡೆಗೆ ಮೇಲ್ವಿಚಾರಣೆ ಇರಲಿಲ್ಲ. ಸೇರ್ಪಡೆಯ ನಂತರ ಕೋರ್ ಡಿಬಿಟಿ ಪೋರ್ಟಲ್‌ನ ಹೊರಗೆ ವಹಿವಾಟುಗಳನ್ನು ನಡೆಸಲಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯವಿಧಾನವಿಲ್ಲ. ಫಲಾನುಭವಿಗಳಿಗೆ ಅವರ ಕುಂದುಕೊರತೆಗಳ ಸಕಾಲಿಕ ಪರಿಹಾರಕ್ಕೆ ಅನುವಾಗಲು ಮಾಡಲು ಕೇಂದ್ರೀಕೃತ ಕುಂದುಕೊರತೆ ಪರಿಹಾರ ಕಾರ್ಯವಿಧಾನವನ್ನು ಸ್ಥಾಪಿಸಲಾಗಿಲ್ಲ. ರಾಜ್ಯ ಸರ್ಕಾರವು ಡಿಬಿಟಿಯ ಅನುಷ್ಠಾನದ ನಂತರದ ಪ್ರಯೋಜನಗಳು/ಸೇವೆಗಳ ವಿತರಣೆಯ ದಕ್ಷತೆ ಮತ್ತು ಪರಿಣಾಮಕಾರಿತ್ವದ ಮೇಲೆ ಪ್ರಭಾವವನ್ನು ಇನ್ನೂ ಮೌಲ್ಯಮಾಪನ ಮಾಡಿಲ್ಲ ಮತ್ತು ಅಂದಾಜಿಸಿಲ್ಲ.

### *ಹಾಲು ಪ್ರೋತ್ಸಾಹಧನ ಯೋಜನೆ*

ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಡಿಬಿಟಿ ಕೋಶವನ್ನು ಸ್ಥಾಪಿಸಿಲ್ಲವಾದ್ದರಿಂದ ಅದು ಯೋಜನೆಯ ಅನುಷ್ಠಾನದಲ್ಲಿ ನ್ಯೂನತೆಯನ್ನುಂಟು ಮಾಡಿದೆ. ದೋಷಗಳನ್ನು ತ್ವರಿತವಾಗಿ ಸರಿಪಡಿಸಲು ಮತ್ತು ವಿಫಲವಾದ, ತಿರಸ್ಕೃತ ಮತ್ತು ಬಾಕಿ ಉಳಿದಿರುವ ವಹಿವಾಟುಗಳ ಸಂದರ್ಭದಲ್ಲಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲು ಸಮಯಮಿತಿಯನ್ನು ನಿಗದಿಪಡಿಸಿಲ್ಲ, ಹಾಗಾಗಿ ಇದು ಫಲಾನುಭವಿಗಳಿಗೆ ಪ್ರಯೋಜನಗಳ ಸಕಾಲಿಕ ವಿತರಣೆಯ ಮೇಲೆ ಪರಿಣಾಮ ಬೀರಿದೆ. ಯೋಜನೆಯ ವಿವಿಧ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಕಾರ್ಯಕ್ಷಮತೆ ಸೂಚಕಗಳನ್ನು ಅಭಿವೃದ್ಧಿಪಡಿಸಲಾಗಿಲ್ಲ ಮತ್ತು ಯೋಜನೆಯ ಅನುಷ್ಠಾನದ ದಕ್ಷತೆಯನ್ನು ನಿರ್ಣಯಿಸಲು ಕೋರ್ ಡಿಬಿಟಿ ಪೋರ್ಟಲ್‌ಗೆ ಅನುಷ್ಠಾನದ ಹಂತದಲ್ಲಿ ಅಥವಾ ಸೇರ್ಪಡೆ ನಂತರದಲ್ಲಿ ಯೋಜನೆಯ ಮೌಲ್ಯಮಾಪನವನ್ನು ನಡೆಸಲಾಗಿಲ್ಲ.

### *ಕೃಷಿ ಇಲಾಖೆ*

ಇಲಾಖೆಯು ರೈತಸಿರಿ ಮತ್ತು ಎನ್‌ಎಫ್‌ಎಸ್‌ಎಮ್ ಯೋಜನೆಗಳಿಗೆ 2019-20ರ ಹಿಂದಿನ ಅವಧಿಗೆ ಪರಂಪರಾಗತ ದತ್ತಾಂಶವನ್ನು ಹೊಂದಿಲ್ಲ ಮತ್ತು ತಂತ್ರಜ್ಞಾನ ಪಾಲುದಾರರೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿಲ್ಲ. ವಿಫಲವಾದ/ತಿರಸ್ಕೃತ/ಬಾಕಿ ಉಳಿದಿರುವ ವಹಿವಾಟುಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಗಳನ್ನು ಕೈಗೊಳ್ಳಲು ಇದು ಯಾವುದೇ ಕಾಲಮಿತಿಗಳನ್ನು ನಿಗದಿಪಡಿಸಿಲ್ಲ. ಯೋಜನೆಗಳ ಅನುಷ್ಠಾನದ ನಂತರದ ಮೌಲ್ಯಮಾಪನವನ್ನು ಕೈಗೊಳ್ಳಲಾಗಿಲ್ಲ. ಇದು ಯೋಜನೆಗಳ ಅನುಷ್ಠಾನದ ಪರಿಣಾಮಕಾರಿ ಮೇಲ್ವಿಚಾರಣೆಯ ಮೇಲೆ ಪರಿಣಾಮ ಬೀರಿದೆ.

## ಶಿಫಾರಸುಗಳು

**ಲೆಕ್ಕಪರಿಶೋಧನೆಯು ಕೆಳಕಂಡಂತೆ ಶಿಫಾರಸು ಮಾಡುತ್ತದೆ:**

### *ರಾಜ್ಯ ಸರ್ಕಾರ*

*ನಗದು ವಿತರಣೆಯನ್ನು ಒಳಗೊಂಡಿರುವ ಎಲ್ಲಾ ಯೋಜನೆಗಳನ್ನು ಗುರುತಿಸಲು ಮತ್ತು ಸೇರ್ಪಡೆ ಮಾಡಲು ಸರ್ಕಾರವು ಹೊಸದಾಗಿ ಕಾಲಮಿತಿಯನ್ನು ನಿಗದಿಪಡಿಸಬೇಕು.*

*ಸರ್ಕಾರವು ಪ್ರತಿ ವಹಿವಾಟಿನ ಹಂತಕ್ಕೆ ಸಮಯಾವಧಿಯನ್ನು ನಿರ್ದಿಷ್ಟಪಡಿಸಬೇಕು ಮತ್ತು ಬಳಕೆದಾರರ ಇಲಾಖೆಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಬೇಕು. ತಪ್ಪಾದ ಖಾತೆಗಳಿಗೆ ಹಣ ಜಮೆ ಮತ್ತು ವಿಫಲವಾದ, ಬಾಕಿಯಿರುವ, ತಿರಸ್ಕೃತ ವಹಿವಾಟುಗಳು ಇವುಗಳ ಬಗ್ಗೆ ಪರಿಹಾರಕ ಕ್ರಮಗಳನ್ನು ಕೈಗೊಳ್ಳಲು ಸಮಯಮಿತಿವನ್ನು ನಿಗದಿಪಡಿಸಲು ಇಲಾಖೆಗಳಿಗೆ ನಿರ್ದೇಶನ ನೀಡಬೇಕು.*

### *ಡಿಬಿಟಿ ಕೋಶ*

*ಡಿಬಿಟಿ ಕೋಶವು ಮಾಹಿತಿ ತಂತ್ರಜ್ಞಾನ ಅಪ್ಲಿಕೇಶನ್‌ಗಳನ್ನು ಹೊಂದಿಲ್ಲದಂತಹ ಇಲಾಖೆಗಳನ್ನು ಗುರುತಿಸಬೇಕು ಮತ್ತು ಯೋಜನೆಗಳ ಸಕಾಲಿಕ ಸೇರ್ಪಡೆಗಾಗಿ ಅಂತಹ ಅಪ್ಲಿಕೇಶನ್‌ಗಳ ಅಭಿವೃದ್ಧಿಗಾಗಿ ಅವುಗಳಿಗೆ ಸಹಕಾರಿಯಾಗಬೇಕು.*

*ದತ್ತಾಂಶದ ನಿಯತಕಾಲಿಕ ಸಮನ್ವಯ ಮತ್ತು ವ್ಯತ್ಯಾಸಗಳ ತಿದ್ದುಪಡಿಯನ್ನು ಖಚಿತಪಡಿಸಿಕೊಳ್ಳಲು ವಿವಿಧ ಜವಾಬ್ದಾರಸ್ಥರೊಂದಿಗೆ ಏಕೀಕರಣವನ್ನು ಬಲಪಡಿಸಬೇಕು.*

*ಪ್ರಯೋಜನಗಳ ಸಕಾಲಿಕ ವಿತರಣೆಗಾಗಿ ಅದರ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಡಿಬಿಟಿ ಕೋಶ ಮೌಲ್ಯೀಕರಣ ಪರಿಶೀಲನೆಗಳನ್ನು ಬಲಪಡಿಸಬೇಕು.*

*ಡಿಬಿಟಿ ಕೋಶ ಆದ್ಯತೆಯ ಆಧಾರದ ಮೇಲೆ ಕೋರ್ ಡಿಬಿಟಿ ಪೋರ್ಟಲ್‌ನ ಎಲ್ಲಾ ಘಟಕಗಳನ್ನು ಒಳಗೊಂಡಿರುವ ಅಗತ್ಯ ಅಪಾಯದ ಮೌಲ್ಯಮಾಪನ ಮತ್ತು ಭದ್ರತಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕು.*

*ಡಿಬಿಟಿ ಕೋಶವು ಫಲಾನುಭವಿಗಳೊಂದಿಗೆ ದ್ವಿಮುಖ ಸಂವಹನವನ್ನು ಸ್ಥಾಪಿಸಲು ಪ್ರತಿಕ್ರಿಯೆಯನ್ನು ಒದಗಿಸುವುದು ಸೇರಿದಂತೆ ಕೇಂದ್ರೀಕೃತ ಕುಂದುಕೊರತೆ ಪರಿಹಾರ ಕಾರ್ಯವಿಧಾನವನ್ನು ಸ್ಥಾಪಿಸಬೇಕು.*

### *ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ*

*ಇಲಾಖೆಯು ಇತರ ಸ್ವತಂತ್ರ ಅಪ್ಲಿಕೇಶನ್‌ಗಳೊಂದಿಗೆ ಕ್ಷೀರಸಿರಿ ಅಪ್ಲಿಕೇಶನ್‌ನ ಏಕೀಕರಣವನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಬೇಕು ಮತ್ತು ನೈಜ ಸಮಯದ ಡೇಟಾ ಲಭ್ಯತೆ ಮತ್ತು ಮೌಲ್ಯೀಕರಣಕ್ಕಾಗಿ ಎಲ್ಲಾ ದತ್ತಸಂಚಯಗಳ ಡಿಜಿಟಲೀಕರಣವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಮೌಲ್ಯೀಕರಣ ಪ್ರಕ್ರಿಯೆಯಲ್ಲಿ ಹಸ್ತಚಾಲಿತ ಮಧ್ಯಸ್ಥಿಕೆಗಳನ್ನು ತಡೆಯಬೇಕು.*

*ಎಲ್ಲಾ ಮಾಡ್ಯೂಲ್‌ಗಳೂ ಅನುಷ್ಠಾನಗೊಳ್ಳುವುದನ್ನು ಇಲಾಖೆಯು ಖಚಿತಪಡಿಸಿಕೊಳ್ಳಬೇಕು. ಅನಧಿಕೃತ ಬದಲಾವಣೆಗಳು ಮತ್ತು ವಿಚಲನಗಳನ್ನು ತಪ್ಪಿಸಲು ಇನ್‌ಪುಟ್ ದೃಢೀಕರಣ ನಿಯಂತ್ರಣಗಳನ್ನು ಬಲಪಡಿಸುವುದರ ಜೊತೆಗೆ ದುರ್ಬಲತೆಗಳು ಮತ್ತು ಸಂಬಂಧಿತ ಅಪಾಯಗಳನ್ನು*

*ಗುರುತಿಸಲು ಕ್ಷೀರಸಿರಿ ಅಪ್ಲಿಕೇಶನ್‌ನ ಅಪಾಯದ ಮೌಲ್ಯಮಾಪನ ಮತ್ತು ಭದ್ರತಾ ಪರಿಶೋಧನೆಯನ್ನು ಕೈಗೊಳ್ಳಬೇಕು.*

*ಸಕಾಲದಲ್ಲಿ ನಗದು ಪ್ರಯೋಜನಗಳನ್ನು ತಲುಪಿಸುವುದನ್ನು ಖಚಿತಪಡಿಸಿಕೊಳ್ಳಲು ಪಾವತಿ ಅನುಸೂಚಿ ಬಂಧ ಫೈಲ್‌ಗಳ ರಚನೆಯಲ್ಲಿ ಮತ್ತು ಡಿಡಿಒ ಮಟ್ಟದಲ್ಲಿನ ಅನುಮೋದನೆಯಲ್ಲಿ ವಿಳಂಬಗಳು ಕನಿಷ್ಠವಾಗಿರುವಂತೆ ಇಲಾಖೆಯು ಖಚಿತಪಡಿಸಿಕೊಳ್ಳಬೇಕು.*

*ಸಣ್ಣ ಮತ್ತು ಮಧ್ಯಮ ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ಜಾನುವಾರು ಸಾಕಣೆಯನ್ನು ಉತ್ತೇಜಿಸಲು ಪ್ರೋತ್ಸಾಹಧನವನ್ನು ನೀಡಲಾಗುವುದರಿಂದ ಪ್ರೋತ್ಸಾಹಧನಗಳನ್ನು ವಿತರಿಸಲು ಸರ್ಕಾರವು ಗರಿಷ್ಠ ಮಿತಿಯನ್ನು ನಿಗದಿಪಡಿಸಬೇಕು.*

### *ಕೃಷಿ ಇಲಾಖೆ*

*ಕೆಎಸ್‌ಆರ್‌ಎಸಿಯಿಂದ ಪರಂಪರಾಗತ ದತ್ತಾಂಶದ ವರ್ಗಾವಣೆಗೆ ಇಲಾಖೆಯು ಆದ್ಯತೆಯ ಕ್ರಮ ಕೈಗೊಳ್ಳಬೇಕು.*

**ಬೆಂಗಳೂರು** — **(ಎಸ್.ಶಾಂತಿ ಪ್ರಿಯ)**

**ದಿನಾಂಕ** — **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–1),**

**ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವದೆಹಲಿ** — **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ** — **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**